## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 126 (118)

ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎನ್
ವಿಧಾನ ಸಭೆಯಿಂದ
ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 14.02.2024

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಮಳೆ ಕೊರತೆ ಹಾಗೂ ಬರದಿಂದಾಗಿ ಉಂಟಾಗಿರುವ ಬೆಳೆ ನಷ್ಟದ ಪ್ರಮಾಣ ಎಷ್ಟು; ಬರ ಪರಿಹಾರಕ್ಕಾಗಿ ಸರ್ಕಾರವು ಬಿಡುಗಡೆ ಮಾಡಿರುವ ಹಣ ಎಷ್ಟು;(ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರತಿ ಜಿಲ್ಲೆಯ ಬರ ಘೋಷಣೆ ಆಗಿರುವ ತಾಲುಕುಗಳಲ್ಲಿ ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡಂತ ತಂಡಗಳನು ರಚಿಸಿ,ಸದರಿ ತಂಡಗಳು ಬೆಳಿಹಾನಿಯ ಜಂಟಿ ಸಮೀಕ್ಷೆ ನಡೆಸಿ ಎಲ್ಲಾ ಮಾಹಿತಿಯನು ಕ್ರೋಢೀಕರಿಸಿ ದೃಢೀಕರಿಸಿಕೊಂಡು ಜಿಲ್ಲಾಧಿಕಾರಿಗಳು ನೀಡಿದ ವರದಿಯ ಆಧಾರದ ಮೇಲೆ ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ 46.11 ಲಕ್ಷ ಹೆಕ್ಟೇರ್ ಕೃಷಿ ಹಾಗೂ 2.06 ಲಕ್ಷ ಹೆಕ್ಟೇರ್ ತೋಟಗಾರಿಕೆ ಬೆಳೆಗಳನ್ನು ಸೇರಿದಂತೆ ಒಟ್ಟು 48.17 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ.<br><br>ಕೇಂದ್ರ ಸರ್ಕಾರದಿಂದ NDRF ಅನುದಾನವನು ನಿರೀಕ್ಷಿಸಿ ರಾಜ್ಯ ವಿಪತ್ತು ಪರಿಹಾರ ನಿಧಿ (SDRF) ಮಾರ್ಗಸೂಚಿಗಳ ಪ್ರಕಾರ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಬೆಳೆ ಹಾನಿ ಪರಿಹಾರದ ಮೊದಲನೇ ಕಂತಾಗಿ / ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗುಣವಾಗಿ ಗರಿಷ್ಟ ರೂ.2,000/- ರವರೆಗೆ ಅರ್ಹತೆ ಅನುಸಾರವಾಗಿ ರೈತರಿಗೆ ಪಾವತಿಸಲು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತರಿಗೆ ರೂ.685 ಕೋಟಿ ಬಿಡುಗಡೆಗೊಳಿಸಿದ್ದು, ಈ ಪೈಕಿ ದಿನಾಂಕ:12-02-2024ರವರೆಗೆ 33.09 ಲಕ್ಷ ಅರ್ಹ ರೈತರ ಆಧಾರ ಜೋಡಣೆ ಆಗಿರುವ ಬ್ಯಾಂಕ್ ಖಾತೆಗೆ ರೂ.628.03 ಕೋಟಿಗಳನ್ನು ನೇರವಾಗಿ ಡಿಬಿಟಿ ಮೂಲಕ ಜಮೆ ಮಾಡಲಾಗಿದೆ. (ಜಿಲ್ಲಾವಾರು ವಿವರ **ಅನುಬಂಧ-1**ರಲ್ಲಿ ಒದಗಿಸಿದೆ).<br><br>ಮೇವು ಹಾಗೂ ತುರ್ತು ಕುಡಿಯುವ ನೀರು ಪೂರೈಕೆಗಾಗಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಒಟ್ಟು ರೂ.324.00 ಕೋಟಿ ಹಾಗೂ ಹಸಿರು ಮೇವು ಬೆಳೆಯುವ ಸಲುವಾಗಿ ಮೇವಿನ ಮಿನಿ ಕಿಟ್‌ಗಳನ್ನು ರೈತರಿಗೆ ಉಚಿತವಾಗಿ ವಿತರಿಸಲು ಪಶು ಸಂಗೋಪನೆ ಇಲಾಖೆಗೆ ರೂ.20.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. |

| | |
|---|---|
| | ದಿನಾಂಕ:29-01-2024 ರನ್ವಯ ಜಿಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಒಟ್ಟು ರೂ.735.87ಕೋಟಿ ಹಾಗೂ ತಹಶೀಲಾರ್ ಪಿಡಿ ಖಾತೆಯಲ್ಲಿ ರೂ.131.95 ಕೋಟಿ ಒಟ್ಟು ರೂ.867.82 ಕೋಟಿ ಅನುದಾನ ತುರ್ತು ಬರ ನಿರ್ವಹಣೆ ಕ್ರಮಗಳಿಗೆ ಲಭ್ಯವಿರುತ್ತದೆ. |
| **(ಆ)** ರೈತರಿಗೆ ಬರ ಪರಿಹಾರ ವಿತರಿಸಲು ಸರ್ಕಾರವು ಅನುಸರಿಸುತ್ತಿರುವ ಮಾನದಂಡಗಳೇನು; ಬರ ಪರಿಹಾರ ವಿತರಿಸಲು ಫ್ರೂಟ್ಸ್ ದತ್ತಾಂಶವನ್ನು ಆಧಾರವಾಗಿ ಪರಿಗಣಿಸಲಾಗಿದೆಯೇ; (ವಿವರ ನೀಡುವುದು) | ಅತಿವೃಷ್ಟಿ, ಅನಾವೃಷ್ಟಿ ಹಾಗೂ ಇತರೆ ಪ್ರಕೃತಿ ವಿಕೋಪ ಸಂದರ್ಭದಲ್ಲಿ ತುರ್ತು ಪರಿಹಾರ ನೀಡಲು ಕೇಂದ್ರೀಯ ಗೃಹ ಮಂತ್ರಲಯವು ದಿ:11-7-2023ರಂದು ಹೊರಡಿಸಿರುವ ಮಾರ್ಗಸೂಚಿಗಳು ಹೊರಡಿಸಿರುತದೆ. ಅದರನ್ವಯ ನಿಯಮಾನುಸಾರ ಪರಿಹಾರ ವಿತರಿಸಲಾಗುತ್ತದೆ.<br><br>ಬಾಧಿತ ರೈತರಿಗೆ ತ್ವರಿತವಾಗಿ ಮತ್ತು ಕ್ರಮಬದ್ಧವಾಗಿ ಬೆಳೆ ಹಾನಿ ಪರಿಹಾರವನ್ನು ವಿತರಿಸಲು FRUITS ತಂತ್ರಾಂಶದಲ್ಲಿ ನೋಂದಣಿಯಾಗಿ Farmers ID ಹೊಂದಿರುವ ಹಾಗೂ ಬರ ಘೋಷಣೆಯಾಗಿರುವ ತಾಲ್ಲೂಕುಗಳಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕೃಷಿ, ತೋಟಗಾರಿಕೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳ ತಂಡಗಳನ್ನು ರಚಿಸಿ ಜಂಟಿ ಸಮೀಕ್ಷೆಯ ಮೂಲಕ ದೃಢೀಕರಿಸಿರುವ ವಿಸ್ತೀರ್ಣ ಹಾಗೂ ಬೆಳೆ ಹಾನಿಗೆ ಒಳಪಟ್ಟಿರುವ ಬೆಳೆಗಳಿಗೆ ಅರ್ಹ ರೈತರಿಗೆ ಪರಿಹಾರ ನೀಡಲಾಗುತ್ತಿದೆ. |
| **(ಇ)** ಹಾಗಿದ್ದಲ್ಲಿ, ರಾಜ್ಯದಲ್ಲಿ ಫ್ರೂಟ್ಸ್ ಗುರುತಿನ ಸಂಖ್ಯೆ ಹೊಂದಿರುವ ರೈತರ ಸಂಖ್ಯೆ ಎಷ್ಟು; ದತ್ತಾಂಶದಲ್ಲಿ ದಾಖಲಾಗಿರುವ ಸಾಗುವಳಿ ವಿಸ್ತೀರ್ಣಗಳಲ್ಲಿ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು) | ಜುಲೈ 2023 ಅಂತ್ಯಕ್ಕೆ 63.85ಲಕ್ಷ ರೈತರು FRUITS I D ಹೊಂದಿದ್ದು, ರಾಜ್ಯದ ರೈತರಿಗೆ FRUITS ID ಪಡೆದುಕೊಳ್ಳಲು ನಿರಂತರವಾಗಿ ವ್ಯಾಪಕ ಪ್ರಚಾರ ನೀಡಿ ಕಂದಾಯ ಇಲಾಖೆ, ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಇವರ ಸತತ ಪ್ರಯತ್ನದಿಂದ ಜನವರಿ 2024ರ ಅಂತ್ಯಕ್ಕೆ 71.57 ಲಕ್ಷಗಳ ರೈತರನ್ನು FRUITS ID ರಡಿ ನೋಂದಾಯಿಸಲಾಗಿದೆ. ಜಿಲ್ಲಾವಾರು ವಿವರ **ಅನುಬಂಧ-2** ರಲ್ಲಿ ಒದಗಿಸಿದೆ.<br><br>ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ದಿನಾಂಕ:11-07-2023ರಂದು ಹೊರಡಿಸಿದ ಮಾರ್ಗಸೂಚಿಯನ್ವಯ ಬರ ಪರಿಸ್ಥಿತಿಯಿಂದ ಶೇ.33 ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಉಂಟಾದ ಬೆಳೆ ಹಾನಿಗೆ ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತ ಗೊಳಿಸಿ ತಾಲ್ಲೂಕುವಾರು ಸಿದ್ಧಪಡಿಸಿದ ಮೆಮೊರಾಂಡಮ್‌ರಂತೆ ಬೆಳೆ ಹಾನಿಗೊಳಗಾದ ಬೆಳೆಗಳಿಗೆ ಪರಿಹಾರ ಪಾವತಿಸಲಾಗುತ್ತಿದೆ. |
| **(ಈ)** ದತ್ತಾಂಶದಲ್ಲಿ ಆಗಿರುವ ವ್ಯತ್ಯಾಸವನ್ನು ಸರಿಪಡಿಸಿ ವಿಸ್ತೀರ್ಣದ ವಿವರವನ್ನು ದಾಖಲಿಸಲು ಹಾಗೂ ರಾಜ್ಯದ ಎಲ್ಲಾ ರೈತರ ಫ್ರೂಟ್ಸ್ ಗುರುತಿನ ಸಂಖ್ಯೆ ಪಡೆಯಲು ಅನುವಾಗುವಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರೈತರು FRUITS ID ರಡಿ ನೋಂದಾಯಿಸುವಂತೆ, ವ್ಯಾಪಕ ಪ್ರಚಾರ ನೀಡಲಾಗಿದೆ. ಮುಂದುವರೆದು, ಕಂದಾಯ ಇಲಾಖೆ, ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ಬಳಸಿಕೊಂಡು ಪಹಣಿ ಪತ್ರಿಕೆಯಲ್ಲಿರುವ ಎಲ್ಲಾ ರೈತರನ್ನು ಸಂಪರ್ಕಿಸಿ ಜುಲೈ 2023ರ ಅಂತ್ಯಕ್ಕೆ 63.85 ಲಕ್ಷ ರೈತರು FRUIT ID ಹೊಂದಿದ್ದು, ಜನವರಿ 2024ರ ಅಂತ್ಯಕ್ಕೆ 71.57 ರೈತರು FRUITS ID ರಡಿ ನೋಂದಾಯಿಸಲಾಗಿದೆ. ಇದರ ಪ್ರಯತ್ನವಾಗಿ ಜುಲೈ-2023ರಿಂದ ಜನವರಿ-2024ರ ಅಂತ್ಯದವರೆಗೆ ಒಟ್ಟು |

| | |
|---|---|
| | 7.72 ಲಕ್ಷ ರೈತರನ್ನು ಹೆಚ್ಚುವರಿಯಾಗಿ FRUITS ID ಪಡೆದಿದ್ದಾರೆ. |
| (ಉ) ಬೆಳೆ ಪರಿಹಾರ ಪಡೆಯಲು ಅರ್ಹರಿರುವ ರೈತರ ಸಂಖ್ಯೆ ಎಷ್ಟು; ಈವರೆಗೆ ಎಷ್ಟು ಜನ ರೈತರಿಗೆ ಬರ ಪರಿಹಾರ ಹಣ ನೀಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | FRUITS ತಂತ್ರಾಂಶದಲ್ಲಿ ದಾಖಲಾಗಿರುವ ರೈತರ ಮಾಹಿತಿಯನು ಪರಿಗಣಿಸಿ ಬರ ಘೋಷಣೇಯಾಗಿರುವ ತಾಲ್ಲೂಕುಗಳಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಮೆಮೊರಾಂಡಮ್‌ರಂತೆ ಬೆಳೆ ಹಾನಿಯಾಗಿರುವ ಬೆಳಗಳನ್ನು ಪರಿಗಣಿಸಿ ವಾಸ್ತವವಾಗಿ ಬೆಳೆ ನಷ್ಟ ಅನುಭವಿಸಿರುವ ರೈತರ ಮಾಹಿತಿಯನ್ನು ಬೆಳೆ ಸಮೀಕ್ಷೆ ಪ್ರಕಾರ ಗುರುತಿಸಿ ಕೇಂದ್ರ ಸರ್ಕಾರದ SDRF ಮಾರ್ಗಸೂಚಿಗಳಂತೆ ಅರ್ಹತೆಯನುಸಾರ ರೈತರಿಗೆ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಬೆಳೆ ಪರಿಹಾರ ನೀಡಲಾಗುತ್ತಿದೆ.<br><br>ದಿನಾಂಕ:12-2-2024ರಂತೆ 33.09 ಲಕ್ಷ ಅರ್ಹ ರೈತರಿಗೆ ಒಟ್ಟುರೂ.628.03 ಕೋಟಿ ಪರಿಹಾರ ವಿತರಿಸಲಾಗಿದೆ.<br><br>(ಜಿಲಾವಾರು ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ). |

ಕಡತ ಸಂಖ್ಯೆ: ಕಂಇ 45 ಟಿಎನ್‌ಆರ್ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಅನುಬಂಧ -1

**2023ನೇ ಸಾಲಿನ ಮುಂಗಾರು ಹಂಗಾಮಿನ ಬರ-ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಿಂದ NDRF ಅನುದಾನವನ್ನು ನಿರೀಕ್ಷಿಸಿ SDRF/NDRF ಮಾರ್ಗಸೂಚಿಗಳ ಪ್ರಕಾರ ಬೆಳೆ ಹಾನಿ ಪರಿಹಾರದ ಮೊದಲನೇ ಕಂತಾಗಿ / ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗುಣವಾಗಿ ರೂ.2,000/- ರವರೆಗೆ ರೈತರಿಗೆ ಪಾವತಿಸಿರುವ ಜಿಲ್ಲಾವಾರು ವಿವರ:**

| ಕ್ರ. ಸಂ. | ಜಿಲ್ಲೆ | ಫಲಾನುಭವಿಗಳ ಸಂಖ್ಯೆ | ಪರಿಹಾರ ಮೊತ್ತ |
|---|---|---|---|
| 1 | ಬಾಗಲಕೋಟೆ | 160128 | 317526550 |
| 2 | ಬೆಂಗಳೂರು ಗ್ರಾಮಾಂತರ | 59342 | 106684023 |
| 3 | ಬೆಂಗಳೂರು ನಗರ | 12241 | 21437292 |
| 4 | ಬೆಳಗಾವಿ | 341415 | 635135398 |
| 5 | ಬಳ್ಳಾರಿ | 35099 | 69087578 |
| 6 | ಬೀದರ್ | 146255 | 281790854 |
| 7 | ವಿಜಯಪುರ | 252169 | 502886114 |
| 8 | ಚಾಮರಾಜನಗರ | 43772 | 82005733 |
| 9 | ಚಿಕ್ಕಮಗಳೂರು | 46853 | 87733678 |
| 10 | ಚಿತ್ರದುರ್ಗ | 131402 | 255629499 |
| 11 | ದಕ್ಷಿಣ ಕನ್ನಡ | 1338 | 2312064 |
| 12 | ದಾವಣಗೆರೆ | 75636 | 145273725 |
| 13 | ಧಾರವಾಡ | 101584 | 198229301 |
| 14 | ಗದಗ | 108984 | 214842050 |
| 15 | ಕಲಬುರಗಿ | 264918 | 526321005 |
| 16 | ಹಾಸನ | 202503 | 370969103 |
| 17 | ಹಾವೇರಿ | 186846 | 355721072 |
| 18 | ಕೊಡಗು | 10873 | 17528017 |
| 19 | ಕೋಲಾರ | 50070 | 89065248 |
| 20 | ಕೊಪ್ಪಳ | 96425 | 190646604 |
| 21 | ಮಂಡ್ಯ | 75025 | 132397666 |
| 22 | ಮೈಸೂರು | 88625 | 158378077 |
| 23 | ರಾಯಚೂರು | 120508 | 239408940 |
| 24 | ಶಿವಮೊಗ್ಗ | 75423 | 142942218 |
| 25 | ತುಮಕೂರು | 178584 | 322690276 |
| 26 | ಉಡುಪಿ | 18523 | 25993906 |
| 27 | ಉತ್ತರ ಕನ್ನಡ | 71407 | 113881824 |
| 28 | ಚಿಕ್ಕಬಳ್ಳಾಪುರ | 86773 | 157782376 |
| 29 | ರಾಮನಗರ | 59198 | 105832575 |
| 30 | ಯಾದಗಿರಿ | 90520 | 179033658 |
| 31 | ವಿಜಯನಗರ | 117267 | 231216714 |
| **ಒಟ್ಟು** | | **3309706** | **6280383138** |

ಕರ್ನಾಟಕ ರಾಜ್ಯ ವಿಪತ್ತು
ನಿರ್ವಹಣಾ ಪ್ರಾಧಿಕಾರ (ಕೆ.ಎಸ್.ಡಿ.ಎಮ್.ಎ)
ಕೊಠಡಿ ನಂ: 546, 5ನೇ ಮಹಡಿ

## ಅನುಬಂಧ-2

| Comparison of Farmers registration in FRUITS (July to 18-1-2024) | | | |
|---|---|---|---|
| **dist_name** | **Number of Farmers Registered with Land up to 31.07.2023** | **Number of Farmers Registered with Land up to 18.01.2024** | **Number of Farmers registered between July and as of now** |
| Bagalkot | 236337 | 255968 | 19631 |
| Bangalore Rural | 105897 | 113557 | 7660 |
| Bangalore Urban | 54885 | 63742 | 8857 |
| Belgaum | 588388 | 659806 | 71418 |
| Bellary | 110928 | 132758 | 21830 |
| Bidar | 215015 | 229013 | 13998 |
| Bijapur | 312575 | 351412 | 38837 |
| Chamrajnagar | 122453 | 139675 | 17222 |
| Chikkaballapur | 141599 | 166388 | 24789 |
| Chikmagalur | 148682 | 166878 | 18196 |
| Chitradurga | 234102 | 263032 | 28930 |
| Dakshina Kannada | 174910 | 196781 | 21871 |
| Davangere | 189421 | 215916 | 26495 |
| Dharwad | 148462 | 161090 | 12628 |
| Gadag | 159917 | 172799 | 12882 |
| Gulbarga | 318736 | 356652 | 37916 |
| Hassan | 315942 | 340775 | 24833 |
| Haveri | 241645 | 260344 | 18699 |
| Kodagu | 59242 | 63981 | 4739 |
| Kolar | 147675 | 172875 | 25200 |
| Koppal | 184394 | 204949 | 20555 |
| Mandya | 302603 | 328698 | 26095 |
| Mysore | 273456 | 312254 | 38798 |
| Raichur | 249654 | 284621 | 34967 |
| Ramnagar | 142512 | 167833 | 25321 |
| Shimoga | 182086 | 201302 | 19216 |
| Tumkur | 375707 | 446328 | 70621 |
| Udupi | 166791 | 182143 | 15352 |
| Uttar Kannada | 184402 | 210535 | 26133 |
| VIJAYANAGARA | 147150 | 160189 | 13039 |
| Yadgir | 148736 | 174174 | 25438 |
| Other State | 767 | 989 | 222 |
| **Total** | **6385069** | **7157457** | **772388** |

ಎಸ್.ಆರ್. ಶಿವಶಂಕರ್
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ & ನೋ.ಮು)